# ಕಾಶಿಯಲ್ಲಿ ಕನ್ನಡಿಗರಿಗೊಂದು ಅತಿಥಿ ಗೃಹ

**ಕಾಶಿಯ ಗಂಗಾ ತಟದಲ್ಲಿ ಸದಾಕಾಲ ಪ್ರವಾಸಿಗರ ಕಲರವ. ಜನದಟ್ಟಣೆಯ ಈ ಸ್ಥಳದಲ್ಲಿ ಕರ್ನಾಟಕದಿಂದ ಬರುವ ಯಾತ್ರಿಗಳಿಗೆಂದು ಅತಿಥಿಗೃಹವೊಂದಿದೆ.**

■ ಪ್ರಕಾಶ ಬಾರ್ಕಿ





ಹಿಂದೂಗಳ ಪವಿತ್ರ ಯಾತ್ರಾ ಸ್ಥಳವಾದ ವಾರಾಣಸಿಯಲ್ಲಿ ಕರ್ನಾಟಕದಿಂದ ಬರುವ ಯಾತ್ರಿಗಳಿಗೆಂದೇ ಒಂದು ಅತಿಥಿಗೃಹವಿದೆ. ಅದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ.

1928ರಲ್ಲಿ ಆಗಿನ ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕರ್ನಾಟಕದ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಗಂಗಾನದಿಯ ದಡದಲ್ಲಿನ ಹನುಮಾನ್ ಘಾಟ್‌ನಲ್ಲಿ 'ಕರ್ನಾಟಕ ಅತಿಥಿ ಗೃಹ' ನಿರ್ಮಿಸಿದರು.

ಒಡೆಯರ್ ಅವರ ಆಡಳಿತ ಪರ್ವವನ್ನು ಮೈಸೂರು ಸಂಸ್ಥಾನದ ಸುವರ್ಣ ಯುಗವೆಂದು ವ್ಯಾಖ್ಯಾನಿಸಲಾಗಿದೆ. ಮಿಂಟೋ ಕಣ್ಣಿನ ಆಸ್ಪತ್ರೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ತಾಂತ್ರಿಕ ಕಾಲೇಜು, ಕೆ.ಆರ್.ಎಸ್. ಜಲಾಶಯ, ಬೆಂಗಳೂರು ಪುರಭವನ, ನಿಮ್ಹಾನ್ಸ್, ಮೈಸೂರು ಪೇಪರ್ ಮಿಲ್, ಗಂಧದೆಣ್ಣೆ ಕಾರ್ಖಾನೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸೇರಿದಂತೆ ನೂರಾರು ಸಂಸ್ಥೆಗಳನ್ನು ಸ್ಥಾಪಿಸಿದ ಹಿರಿಮೆ ಅವರದು. ಈ ನಿರ್ಮಾಣಗಳ ಸಾಲಿನಲ್ಲಿ ಕಾಶಿಯ 'ಕರ್ನಾಟಕ ಅತಿಥಿ ಗೃಹ'ವೂ ಸೇರಿದೆ.

1915ರಲ್ಲಿಯೇ ಹನುಮಾನ್ ಘಾಟ್‌ನ ಎಡ ಪಾರ್ಶ್ವ ಭಾಗವನ್ನು ಪುನರ್ ನಿರ್ಮಾಣ ಮಾಡಿ, 'ಕರ್ನಾಟಕ ಘಾಟ್' ಎಂದು ಮರುನಾಮಕರಣ ಮಾಡಲಾಗಿದೆ. ಈ ವಿಷಯವನ್ನು ಘಾಟ್‌ಗೆ ಹೋಗಲು ನಿರ್ಮಿಸಿರುವ ಮೂರು ಮೆಟ್ಟಿಲುಗಳ ಮೇಲೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಕೆತ್ತಲಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ವರ್ಷಕ್ಕೊಮ್ಮೆ ಕಾಶಿಗೆ ಭೇಟಿ ನೀಡುತ್ತಿದ್ದರಂತೆ. ತಮ್ಮ ಭೇಟಿಯ ಸಮಯದಲ್ಲಿ ಅವರು ಇದೇ ಅತಿಥಿ ವಸತಿ ಗೃಹದಲ್ಲಿ ವಾಸ್ತವ್ಯ ಹೂಡುತ್ತಿದ್ದರಂತೆ. 50 ಮೆಟ್ಟಿಲುಗಳನ್ನು ಇಳಿದು ಗಂಗಾನದಿಯಲ್ಲಿ ಪವಿತ್ರ ಸ್ನಾನ ಮಾಡುತ್ತಿದ್ದ ಮಹಾರಾಜರು, ನದಿಯತ್ತ ಸಾಗುತ್ತಿದ್ದ ಭೂಗತ ದಾರಿಯನ್ನು ಯಥಾವತ್ತು ಸಂರಕ್ಷಿಸಲಾಗಿದೆ.

ವಸತಿಗೃಹದ ಪಕ್ಕವೇ ನದಿ ಹರಿಯುತ್ತಿದ್ದು, ಮೆಟ್ಟಿಲು ಇಳಿಯುವಾಗಿನ ಎಡಭಾಗದಲ್ಲಿ ಸತ್ಯಹರಿಶ್ಚಂದ್ರ ಘಾಟ್ ಮತ್ತು ಬಲ ಭಾಗದಲ್ಲಿ ಹನುಮಾನ್ ಘಾಟ್ ಮತ್ತು ಮಂದಿರವಿದೆ.



ಮೈಸೂರು ಸರ್ಕಾರದ ರಾಜರ ಆಳ್ವಿಕೆ ನಂತರ ಕರ್ನಾಟಕ ಸರ್ಕಾರ ಈ ಅತಿಥಿ ಗೃಹದ ಉಸ್ತುವಾರಿ ವಹಿಸಿಕೊಂಡಿದೆ. ನವೀಕರಿಸಿ ಹೊಸ ಕಟ್ಟಡ, ವಿಶೇಷ ವ್ಯವಸ್ಥೆಯ ರೂಮುಗಳು ಮತ್ತು ವ್ಯವಸ್ಥಾಪಕರನ್ನು ನೇಮಿಸಿದೆ. ಅತಿಥಿ ಗೃಹದಲ್ಲಿ ಹೊಸ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅಲ್ಲಿನ ಕೊಠಡಿಗಳು ಸ್ವಚ್ಛವಾಗಿದ್ದು, ದಿನಪೂರ್ತಿ ಬಿಸಿನೀರಿನ ವ್ಯವಸ್ಥೆ ಹೊಂದಿವೆ. ರಿಯಾಯಿತಿ ದರದಲ್ಲಿ, ಅದೂ ಗಂಗಾನದಿಯ ದಡದಲ್ಲಿ ಕನ್ನಡಿಗರಿಗೆ ಉತ್ಕೃಷ್ಟ ವಸತಿಗೃಹಗಳು ಸಿಗುತ್ತಿವೆ.

ಕನ್ನಡ ಬಲ್ಲ ಆಡಳಿತಗಾರರು ಕಾರ್ಯ ನಿರ್ವಹಿಸುವ ವಸತಿಗೃಹದಲ್ಲಿ ಆತ್ಮೀಯ ಪರಿಸರವಿದೆ. 'ಮೊದಲ ಬಾರಿಗೆ ಕಾಶಿಗೆ ಬರುವ ಕರ್ನಾಟಕದ ಯಾತ್ರಾರ್ಥಿಗಳಿಗೆ ಮತ್ತು ಹಿಂದಿ ಗೊತ್ತಿಲ್ಲದವರಿಗೆ ಅಲ್ಲಿ ಸೂಕ್ತ ಮಾರ್ಗದರ್ಶನ ಲಭ್ಯ. ಪ್ರಯಾಣಿಕರಿಗೆ ಗಂಗಾನದಿ ಸ್ನಾನ, ವಾಹನ ವ್ಯವಸ್ಥೆ, ಆಹಾರ ಸೌಲಭ್ಯದ ಬಗ್ಗೆ ಮಾಹಿತಿ ನೀಡಲಾಗುತ್ತದೆ' ಎನ್ನುತ್ತಾರೆ ಅತಿಥಿಗೃಹದ ವ್ಯವಸ್ಥಾಪಕರಾದ ಟಿ. ಕೃಷ್ಣಮೂರ್ತಿ.

1969ರವರೆಗೆ ವಸತಿಗೃಹದಲ್ಲಿ ಉಚಿತ ಅನ್ನದಾಸೋಹದ ವ್ಯವಸ್ಥೆಯಿತ್ತು. ಅಡುಗೆಯವರು ಮತ್ತು ಸಿಬ್ಬಂದಿ ಕೊರತೆಯಿಂದ ಪ್ರಸ್ತುತ ಅನ್ನದಾಸೋಹ ಸ್ಥಗಿತಗೊಂಡಿದೆ.

**ಅತಿಥಿಗೃಹದ ಸಂಪರ್ಕ ಸಂಖ್ಯೆಗಳು: 09491409777, 09026827610**